**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 4568/2022**

**ಸಾಕ್ಷಿಗೆ ದಿನಾಂಕ 22.4.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸುನೀಲ್ | ಪಿ.ಡಬ್ಲ್ಯೂ-4 |
| ತಂದೆಯ/ಗಂಡನ ಹೆಸರು | : | ಸೋಮಣ್ಣ | ಸಿ.ಡಬ್ಲ್ಯೂ-4 |
| ವಯಸ್ಸು | : | 28 | |
| ಉದ್ಯೋಗ | : | ಖಾಸಗಿ ಉದ್ಯೋಗ | |
| ವಾಸಸ್ಥಳ | : | ಸಾಗರೆ | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿರುತ್ತೇನೆ. ಈಗ ಸುಮಾರು 3 ವರ್ಷದ ಹಿಂದೆ ಸರಗೂರು ಪೋಲಿಸರು ನನ್ನನ್ನು ಹಾಗೂ ಇನ್ನೊಬ್ಬರನ್ನು ಸರಗೂರು ಠಾಣೆಗೆ ಕರೆಸಿದ್ದು ಅಲ್ಲಿ ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ತೋರಿಸಿದ್ದು ಅಲ್ಲಿ 1 ನೇ ಆರೋಪಿಯು ಕಳ್ಳತನ ಮಾಡಿರುವ ಆಭರಣಗಳನ್ನು ಸಾಗರೆ ಗ್ರಾಮದ ತನ್ನ ಮನೆಯಲ್ಲಿ ಇಟ್ಟಿರುವುದಾಗಿ ಹೇಳಿದ್ದು ಕರೆದುಕೊಂಡು ಹೋದರೆ ತೋರಿಸುವುದಾಗಿ ಹೇಳಿದ ಮೇರೆಗೆ ಪೋಲಿಸರು ಇಲಾಖಾ ಜೀಪಿನಲ್ಲಿ 1 ನೇ ಆರೋಪಿಯ ಮನೆಗೆ ಕರೆದುಕೊಂಡು ಹೋಗಿದ್ದು ಅಲ್ಲಿ 1 ನೇ ಆರೋಪಿಯು ತನ್ನ ಮನೆಯ ಒಳಗಿನಿಂದ ವಿವಿಧ ಚಿನ್ನದ ಆಭರಣಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಪೋಲಿಸರು ಅಮಾನತ್ತುಪಡಿಸಿಕೊಂಡು ಮಧ್ಯಾಹ್ನದ ಸಮಯದಲ್ಲಿ ಅಮಾನತ್ತು ಪಂಚನಾಮೆಯನ್ನು ಮಾಡಿರುತ್ತಾರೆ. ಸಾಕ್ಷಿದಾರರು ಸದರಿ ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ3 ಎಂದು, ಸಾಕ್ಷಿಯ ಸಹಿಯನ್ನು ನಿಪಿ3 ಎ ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ಚಾಸ 5 ಮತ್ತು 6 ರವರು ಸಹ ಹಾಜರಿದ್ದರು. ಮಹಜರಿನ ಸಮಯದಲ್ಲಿ ಪೋಲಿಸರು ಭಾವಚಿತ್ರವನ್ನು ತೆಗೆದಿರುತ್ತಾರೆ. ಸಾಕ್ಷಿದಾರರು ಸದರಿ 2 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ4 ಮತ್ತು ನಿಪಿ5 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ 2 ಭಾವಚಿತ್ರದಲ್ಲಿರುವ ಒಡವೆಗಳನ್ನು ಸದರಿ ದಿನ

ಪೋಲಿಸರು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಭಾವಚಿತ್ರಗಳನ್ನು ನಿಪಿ6 ಮತ್ತು ನಿಪಿ7 ಎಂದು ಗುರುತಿಸಲಾಯಿತು. ಮೇಲೆ ಹೇಳಿದ ವಿಚಾರವಾಗಿ ಪೋಲಿಸರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಸಮಯ ಕೋರಿದ್ದು 150/- ರೂ. ಖರ್ಚಿನೊಂದಿಗೆ ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ